# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 1075 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಗಣಪತಿ ದುಮ್ಮಾ ಉಳ್ವೇಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 20.08.2025 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕನ್ನಡ ಜಿಲ್ಲೆಯ, ಅಂಕೋಲಾದ ಕೇಣಿ ವಾಣಿಜ್ಯ ಬಂದರು ಯೋಜನೆಯಿಂದ ಸಮುದ್ರವನ್ನೇ ನಂಬಿದ್ದ ಮೀನುಗಾರರಿಗೆ ತೀರ ಸಂಕಷ್ಟ ಉಂಟಾಗಿರುವ ಕಾರಣದಿಂದ ಮತ್ತು ಈ ಯೋಜನೆಯ ವಿರುದ್ಧ ಸಾರ್ವಜನಿಕರು ಹಾಗೂ ಸ್ಥಳೀಯರು ಪರಿಸರ ಹಾನಿಯಾಗುವ ಬಗ್ಗೆ ಆತಂಕದಿಂದ ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಡಲ ತೀರಗಳನ್ನು ಗುರುತಿಸಿ ಖಾಸಗಿ ವಾಣಿಜ್ಯ ಬಂದರು ನಿರ್ಮಾಣ ಮಾಡುತ್ತಿರುವ ಯೋಜನೆಯನ್ನು ಸ್ಥಗಿತಗೊಳಿಸಲು ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಕರ್ನಾಟಕ ಸರ್ಕಾರ ಮಂಡಿಸಿರುವ 2022-23ನೇ ಸಾಲಿನ ಆಯವ್ಯಯ ಕಂಡಿಕೆ 253 ರಲ್ಲಿ "ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೇಣಿಯಲ್ಲಿ ಗ್ರೀನ್‌ಫೀಲ್ಡ್ ಬಂದರನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ" ಎಂದು ಘೋಷಣೆ ಮಾಡಿರುಲಾಗಿದೆ.<br><br>ಪ್ರಸ್ತುತ ರಾಜ್ಯವು ಕೇವಲ ಒಂದು ಆಳವಾದ ಬಂದರನ್ನು ಹೊಂದಿದ್ದು, ಮತ್ತೊಂದು ಆಳ ಬಂದರಿನ ಅವಶ್ಯಕತೆಯಿರುವ ನಿಟ್ಟಿನಲ್ಲಿ ಭಾರತ ಸರ್ಕಾರದ ಬಂದರುಗಳು, ಶಿಪ್ಪಿಂಗ್ ಮತ್ತು ಜಲಮಾರ್ಗ ಸಚಿವಾಲಯದ (Ministry of Port, Shipping and Waterway-MoPSW) ಸೂಚನೆಯಂತೆ ಅಗಸ್ಟ 2016 ರಲ್ಲಿ M/s AECOM ರವರು ಟೆಕ್ನೋ-ಎಕನಾಮಿಕ್ ಫೀಸಿಬಿಲಿಟಿ (Techno –Economic Feasibility Report-TEFR) ವರದಿಯನ್ನು ಸಿದ್ಧಪಡಿಸಿರುತ್ತಾರೆ. M/s. AECOM ರವರು ಕೇಣಿಯನ್ನು ಸೂಕ್ತ ತಾಣವಾಗಿ ಶಿಫಾರಸ್ಸು ಮಾಡಿರುವುದರಿಂದ ಕರಾವಳಿ ಮತ್ತು ಒಳನಾಡು ಪ್ರದೇಶಗಳ ಆರ್ಥಿಕ ಸಮೃದ್ಧಿಗೆ ಸಹಕಾರಿಯಾಗಲಿರುವ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಲೆಯ ಕೇಣಿ, ಬೇಲೆಕೇರಿಯಲ್ಲಿ ಗ್ರೀನ್‌ಫೀಲ್ಡ್ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದ (Public Private Partnership) ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರದ ಆದೇಶ ಪತ್ರ ಸಂ: IDD 68 PSP 2022 (E-746686), ದಿನಾಂಕ: 08.04.2022 ರಲ್ಲಿಆದೇಶಿಸಲಾಗಿದೆ.<br><br>ಮುಂದುವರೆದು, ಸರ್ಕಾರದ ಆದೇಶ ಸಂ: IDD 280 PSP 2021 (E-632148), ದಿನಾಂಕ: 11.04.2022 ರ ಅಧಿಸೂಚನೆಯಲ್ಲಿ ಕೇಣಿ ಬಂದರಿಗೆ ಸಂಬಂಧಿಸಿದಂತೆ Port Limit ನ್ನು ಅಧಿಕೃತವಾಗಿ ಪ್ರಕಟಿಸಿರುತ್ತಾರೆ. KTPP ನಿಯಮಾವಳಿಯ ಪ್ರಕಾರ ಟೆಂಡರನ್ನು ಕರೆಯಲಾಗಿರುತ್ತದೆ. ದಿನಾಂಕ: 05.09.2023 ರಂದು ನಡೆದ ಕರ್ನಾಟಕ ಜಲಸಾರಿಗೆ ಮಂಡಳಿ 9ನೇ ಸಭಾ ನಡವಳಿಯಲ್ಲಿ ಕಂಡಿಕೆ 9.4 ರಲ್ಲಿ Consortium ನಲ್ಲಿ |

| | | |
|---|---|---|
| | | ಒಳಗೊಂಡ M/s. JSW Infrastructure Limited and M/s. JSW Dharamtar Port Private Limited ರವರು ಸಲ್ಲಿಸಿರುವ ಬಿಡ್‌ನ್ನು ಅಂಗೀಕರಿಸಲಾಗಿರುತ್ತದೆ.<br><br>ಕೇಣಿ ಬಂದರಿನ ಅಭಿವೃದ್ಧಿ ಕೆಲಸ ಪ್ರಾರಂಭಕ್ಕೂ ಮುನ್ನ ಪರಿಸರ ಪರಿಣಾಮದ ಮೌಲ್ಯ ಮಾಪನ (EIA) ವರದಿಯನ್ನು ಪಡೆಯಲಾಗಿದ್ದು, ಈ ನಿಟ್ಟಿನಲ್ಲಿ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ನೇತೃತ್ವದಲ್ಲಿ ಆಯೋಜಿಸಲಾಗಿರುತ್ತದೆ. ಸದರಿ ಸಭೆಯಲ್ಲಿ ಯೋಜನೆಯ ಕುರಿತಂತೆ ಸಾರ್ವಜನಿಕರ ಅಹವಾಲಗಳನ್ನು ಪಡೆದು ಅಭಿಪ್ರಾಯ ಸಂಗ್ರಹಿಸಿ ಕೇಂದ್ರ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಭಾರತ ಸರ್ಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕರಾವಳಿ ನಿಯಂತ್ರಣ ಮಂಡಳಿಗಳಿಂದ ಶಾಸನಬದ್ಧ ಅನುಮೋದನೆ ಪಡೆದ ನಂತರ ಯೋಜನೆಯ ಅನುಷ್ಠಾನದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |
| ಆ) | ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವಾಣಿಜ್ಯ ಬಂದರು ನಿರ್ಮಾಣದಿಂದ ಆಗುವ ಪ್ರಕೃತಿ ವಿಕೋಪ ಹಾಗೂ ಪರಿಸರ ಹಾನಿಯ ಬಗ್ಗೆ ಸಂಬಂಧಪಟ್ಟ ವಿಜ್ಞಾನಿಗಳಿಂದ ವರದಿ ಪಡೆಯಲಾಗಿದೆಯೇ; (ಮಾಹಿತಿ ಒದಗಿಸುವುದು) | ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವಾಣಿಜ್ಯ ಬಂದರು ನಿರ್ಮಾಣದಿಂದ ಆಗುವ ಪ್ರಕೃತಿ ವಿಕೋಪ ಹಾಗೂ ಪರಿಸರ ಹಾನಿಯ ಬಗ್ಗೆ ಕರಾರಿನನ್ವಯ ವಿಷಯಪರಿಣಿತ ಸಂಸ್ಥೆಯಾದ Assystem India Ltd Hyderabad ರವರಿಂದ EIA ವರದಿಯನ್ನು ಪಡೆಯಲಾಗಿದ್ದು, ಈ ನಿಟ್ಟಿನಲ್ಲಿ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಸದರಿ ಸಭೆಯಲ್ಲಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿ ಕೇಂದ್ರ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರದ ಷರತ್ತುಗಳಂತೆ ಅನುಷ್ಠಾನದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |
| ಇ) | ಒಂದು ವೇಳೆ ಈ ಯೋಜನೆ ಅನುಷ್ಠಾನಗೊಂಡಲ್ಲಿ ಸದರಿ ಕಡಲ ತೀರಗಳ ನಿವಾಸಿಗಳಿಗೆ ಹಾಗೂ ಕಡಲ ತೀರಗಳಲ್ಲಿ ಮೀನುಗಾರಿಕೆ ಸೇರಿದಂತೆ ಇತರೆ ವಾಣಿಜ್ಯ ವ್ಯವಹಾರಗಳನ್ನು ನಡೆಸುವ ವ್ಯಾಪಾರಿಗಳಿಗೆ ಪರಿಹಾರ ಹಾಗೂ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ; (ಮಾಹಿತಿ ಒದಗಿಸುವುದು) | ಯೋಜನೆಯ ಎಲ್ಲಾ ಅಗತ್ಯ ತೀರುವಳಿಯ ನಂತರ ಯೋಜನೆಯು ಅನುಷ್ಠಾನಗೊಂಡಲ್ಲಿ, ಯೋಜನೆಯ ಅನುಷ್ಠಾನದಿಂದ ಬಾಧಿತರಿಗೆ ಅಗತ್ಯ ಪುನರ್ ವಸತಿ ಮತ್ತು ಪರಿಹಾರವನ್ನು ನಿಯಮಾನುಸಾರ ಕೈಗೊಳ್ಳಲಾಗುವುದು |

| | | |
|---|---|---|
| ಈ) | ಕಡಲ ತೀರದ ಭೂಮಿಯನ್ನು ಸರ್ಕಾರ ಖೇಣಿ ವಾಣಿಜ್ಯ ಯೋಜನೆಗೆ ಒಟ್ಟು ಎಷ್ಟು ಎಕರೆ ಜಾಗವನ್ನು ಗುರುತಿಸಲಾಗಿದೆ? (ನೀಲಿನಕ್ಷೆ ಸಮೇತ ಸಂಪೂರ್ಣ ಮಾಹಿತಿ ಒದಗಿಸುವುದು) | ಕೇಣಿಯಲ್ಲಿ 30 MTPA ಸಾಮರ್ಥ್ಯದ ಕೇಣಿ ವಾಣಿಜ್ಯ ಬಂದರು ಅಭಿವೃದ್ಧಿಗಾಗಿ ರಿಯಾಯಿತಿ ಒಪ್ಪಂದ ಆಗಿದ್ದು, ರಿಯಾಯಿತಿದಾರರು ಸಲ್ಲಿಸಿರುವ ನೀಲಿ ನಕ್ಷೆಯಂತೆ ಜಟ್ಟಿ ಮತ್ತು ಇದಕ್ಕೆ ಸಂಬಂಧಿತ ನಿರ್ಮಾಣ ಕಾಮಗಾರಿಗಳನ್ನು ಕಡಲಾಚೆಯಲ್ಲಿ ರಚಿಸಿರುವ (Reclaimed Land) ಪ್ರದೇಶದಲ್ಲಿ ನಿರ್ಮಿಸಲಾಗುವುದು ಹಾಗೂ ಸಂಪರ್ಕ ಮಾರ್ಗ (Connectivity Corridor) ಕ್ಕಾಗಿ ಅಂದರೆ ರಾಷ್ಟ್ರೀಯ ಹೆದ್ದಾರಿ ಮತ್ತು ಕೊಂಕಣ ರೈಲ್ವೆ ಮಾರ್ಗದ ಸಂಪರ್ಕಕ್ಕಾಗಿ, ರಸ್ತೆ ,ರೈಲ್ವೆ ಟ್ರಾಕ್ ನಿರ್ಮಾಣ ಮತ್ತು ಇತರೆ ಅಗತ್ಯಗಳಿಗಾಗಿ 200 ಎಕರೆ ಪ್ರದೇಶವನ್ನು ತಾತ್ಕಾಲಿಕವಾಗಿ ಗುರುತಿಸಲಾಗಿದೆ. |

**IDD 85 PSP 2025**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**